









(6ನೇ ಪುಟದಿಂದ)

ಕೆಮೆಲಿನ, ಅಜೆಲಿನ ಮುಂತಾದ ಹೂವಿನ ಗಿಡಗಳಿವೆ. ವಿಶೇಷ ಹಣ್ಣುಗಳಾದ ರಂಬುಟಾನ್, ಡುರಿಯನ್, ಮ್ಯಾಂಗೋಚಿನ್, ಲಿಚಿ, ಸ್ಟ್ರಾಬೆರಿಗಳಿವೆ. ಸಾಂಬಾರ ಪದಾರ್ಥಗಳಾದ ಲವಂಗ, ಜಾಯಿಕಾಯಿ, ಇಂಗು ಗಿಡಗಳಿವೆ. ಕೋಲ್ಕತ್ತಾದಿಂದ ತರಿಸಿದ 'ಬುದ್ಧ ಬ್ಯಾಂಬು' ಎಂಬ ವಿಶೇಷ ಬಿದಿರೂ ಇತ್ತು! ಮಿನಿಯೇಚರ್ ಡೇಲಿಯಾ ಹಾಗೂ ಡೇಲಿಯಾ ಗಿಡಗಳಲ್ಲಿ ಹೂ ಕೇವಲ ಸೀಸನ್ನಲ್ಲಿ ಮಾತ್ರವಲ್ಲ, ಸರ್ವಋತುವಿನಲ್ಲೂ ಬರುತ್ತದೆ. ನಾವು ಫೆಬ್ರವರಿಯಲ್ಲಿ ಹೋದಾಗ ಬಣ್ಣ-ಬಣ್ಣದ ಡೇಲಿಯಾಗಳಿದ್ದವು. ಇಂತಹ ಗಿಡಗಳಿಗೆಲ್ಲ ಕೊಡಗಿನಲ್ಲಿ ಬೇಡಿಕೆ ಇದೆ!

ಕೊಡಗಿನಲ್ಲಿ ಮನೆ ಸಣ್ಣದಿರಲಿ ಅಥವಾ ದೊಡ್ಡದಿರಲಿ, ಎಷ್ಟೇ ಶ್ರೀಮಂತರಿರಲಿ ಅಥವಾ ಬಡವರಿರಲಿ– ಅವರ ಮನೆಯ ಮುಂದೊಂದು ಸುಂದರ ಹೂದೋಟ ಇರಲೇಬೇಕು. ಅವರಿಗೆ ತೋಟವನ್ನು ಆರೈಕೆ ಮಾಡುವ ಕಲೆಯೂ ಗೊತ್ತಿದೆ. 'ಗಿಡಗಳ ಮಧ್ಯೆ ಇರುವಾಗ ಎಲ್ಲಾ ಟೆನ್ಷನ್ ಕೂಡಾ ಮರೆಯಾಗುತ್ತದೆ. ಮನಸ್ಸಿಗೆ ಹಿತ, ದೇಹಕ್ಕೂ ವ್ಯಾಯಾಮ' ಎನ್ನುತ್ತಾರೆ ಕೊಡವ ಮಹಿಳೆ ವಸಂತಿ ಅಪ್ಪಚ್ಚು.

ಒಂದು ಮನೆಯಲ್ಲಿ ಒಂದು ಜಾತಿಯ ಅಥವಾ ಬಣ್ಣದ ಗಿಡವಿಲ್ಲದಿದ್ದರೆ ಅಕ್ಕ-ಪಕ್ಕದ ಅಥವಾ ಬಳಗದವರಿಂದ ತರುವುದರ ಬದಲು ನರ್ಸರಿಯಿಂದಲೇ ತರುವ ಪರಿಪಾಠ ಇಲ್ಲಿ ಹೆಚ್ಚು. ಅದಕ್ಕೇ ಇಷ್ಟೊಂದು ನರ್ಸರಿಗಳು ಬೆಳೆದಿರಬಹುದು. ಮಲೆನಾಡಿನ ಬೇರೆ ಭಾಗಗಳಿಗೆ ಹೋಲಿಸಿದರೆ ಗಿಡ ಗೆಳೆತನ ಕಡಿಮೆಯೇ.

'ಗಿಡಗಳ ಆರೈಕೆ ಅಷ್ಟು ಸುಲಭವಲ್ಲ. ಅವುಗಳನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು–ಮಕ್ಕಳ ಹಾಗೆ. ಒಂದೊಂದು ರೀತಿಯ ಗಿಡಕ್ಕೂ ಬೇರೆ– ಬೇರೆ ತರಹದ ಆರೈಕೆ ಅಗತ್ಯ. ಪ್ರತಿಯೊಂದು ಗಿಡಗಳ ಗುಣಕ್ಕನುಗುಣವಾಗಿ ಬಿಸಿಲು, ನೆರಳು, ನೀರು, ಮಣ್ಣು ಪೂರೈಸಬೇಕಾಗುತ್ತದೆ' ಹೀಗೆನ್ನುತ್ತಾರೆ ಕಿಸಾನ್ ನರ್ಸರಿಯ ಒಡತಿ ಸರೋಜ ರಾಮಚಂದ್ರ.